**6 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು & ಎ.ಸಿ.ಜೆ.ಎಮ್**
**ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು ನಗರ**
ಸಿ.ಸಿ. ನಂ.**1258/2026**

**ಪಿರ್ಯಾದಿಯ ಹೆಸರು** ಶ್ರೀಮತಿ ಸಾವಿತ್ರಮ್ಮ

**ವಿರುದ್ದ**

ಆಪಾದಿತರ ಹೆಸರು ದಯಾನಂದ

**ದಂ.ಪ್ರ.ಸಂ.ಕಲಂ *313* ರಡಿಯಲ್ಲಿ ದಾಖಲಿಸಿಕೊಂಡ ಆಪಾದಿತನ ಹೇಳಿಕೆಗಳು**

ಪ್ರಶ್ನೆ 1ಃ ಪಿರ್ಯಾದುದಾರರು ತಮ್ಮ ಸಾಕ್ಷೀ ವಿಚಾರಣೆಯ ಭಾಗವಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಏನು ಹೇಳಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರ?
ಉತ್ತರಃ **ತಿಳಿದುಕೊಂಡಿದ್ದೇನೆ.**

ಪ್ರಶ್ನೆ 2ಃ ಪ್ರಾ.ಸ.1- ಪಿರ್ಯಾದುದಾರರಾದ ಶ್ರೀಮತಿ ಸಾವಿತ್ರಮ್ಮ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನೀವು ಪಿರ್ಯಾದುದಾರರ ಬಳಿ ಚೀಟಿ ಹಣ ರೂ.4,36,310 ನ್ನು ನಿಮಗೆ ನೀಡಿರುತ್ತಾರೆ ಹಾಗೂ ಸದರಿ ಹಣವನ್ನು ನೀವು ಮರುಪಾವತಿಸುವುದಾಗಿ ಒಪ್ಪಿರುತ್ತೀರ ಎಂದು ತಿಳಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?
ಉತ್ತರಃ **ಸುಳ್ಳು.**

ಪ್ರಶ್ನೆ 3ಃ ಮುಂದುವರೆದು, ನೀವು ನೀಡಬೇಕಾದ ಹಣದ ಕುರಿತು ಹಚ್.ಡಿ. ಎಫ್ ಸಿ ಬ್ಯಾಂಕ್ ಯಲಹಂಕ ಶಾಖೆ, ಬೆಂಗಳೂರು ನೇದ್ದರ ಚೆಕ್ಕು **ರೂ.5,00,000/-**(ರೂ.ಐದು ಲಕ್ಷ) ಹಣಕ್ಕೆ ಚೆಕ್ **ನಂ.000112** ದಿನಾಂಕಃ25.06.2025 ಎಂದು ನಮೂದಿಸಿದ ಈ ಚೆಕ್ಕುಗಳನ್ನು ನೀಡಿರುತ್ತೀರ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?
ಉತ್ತರಃ **ಸುಳ್ಳು.**

ಪ್ರಶ್ನೆ 4: ಪ್ರಾ.ಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನೀವು ನೀಡಿದ ಚೆಕ್ಕುಗಳನ್ನು ನಗದೀಕರಣಕ್ಕಾಗಿ ನಿಮ್ಮ ಸೂಚನೆಯಂತೆ, ಅವರು ಖಾತೆ ಹೊಂದಿರುವ ಬ್ಯಾಂಕಿಗೆ ಎರಡು ಸಲ ಸಲ್ಲಿಸಿದಾಗ ಮೊದಲನೆ ಸಲ **"ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ"** ಮತ್ತು ಎಂಬ ಕಾರಣದಿಂದ ದಿನಾಂಕಃ26.06.2025 ಮತ್ತು ರಂದು ಹಿಂಬರಹದೊಂದಿಗೆ ಅಮಾನ್ಯಗೊಂಡಿರುತ್ತದೆ

ಎರಡನೇ ಸಲ ಸಲ್ಲಿಸಿದಾಗ " Alteration in name/ amount failed prohibited", ಎಂಬ ಕಾರಣದಿಂದ ದಿನಾಂಕಃ18.07.2025 ಮತ್ತು ರಂದು ಹಿಂಬರಹದೊಂದಿಗೆ ಅಮಾನ್ಯಗೊಂಡಿರುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ಸುಳ್ಳು.**

ಪ್ರಶ್ನೆ 5 : ಮುಂದುವರೆದು, ದಿನಾಂಕಃ29.07.2025 ರಂದು ತಮ್ಮ ವಕೀಲರ ಮೂಲಕ ನಿಮಗೆ ಆರ್.ಪಿ.ಎ.ಡಿ ಮೂಲಕ ನೋಟೀಸನ್ನು ನೀಡಿರುವುದಾಗಿ, ಸದರಿ ನೋಟೀಸು ಲೆಫ್ಟ್ ಎಂಬ ಷರಾದೊಂದಿಗೆ ಹಿಂದಿರುಗಿ ಬಂದಿರುತ್ತದೆ ಎಂದು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ನೋಟೀಸ್ ತಲುಪಿರುವುದಿಲ್ಲ.**

ಪ್ರಶ್ನೆ 6: ಪ್ರಾ.ಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಹಾಗೂ ಹಣವನ್ನು ಮರುಪಾವತಿಸಿರುವುದಿಲ್ಲ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ನೋಟೀಸ್ ತಲುಪಿರುವುದಿಲ್ಲ.**

ಪ್ರಶ್ನೆ 7: ಪ್ರಾ.ಸಾ.1 ರವರು ಮುಂದುವರೆದು ನೀವು ನೀಡಿದ ಚೆಕ್ಕುಗಳು, ಬ್ಯಾಂಕ್ ಮೆಮೋಗಳು, ನೋಟೀಸಿನ ಕಛೇರಿ ಪ್ರತಿ, ಅಂಚೆ ರಶೀದಿ, ವಾಪಸ್ಸಾದ ಅಂಚೆ ಲಕೋಟೆ ಮತ್ತು ನೋಟೀಸ್ ಪ್ರತಿ ಹಾಗೂ ಸಂಪಿಗೆ ಹಳ್ಳಿ ಪೊಲೀಸ್ ಠಾಣೆಯವರು ನೀಡಿದ ಸ್ವೀಕೃತಿ ಇವುಗಳನ್ನು ಹಾಜರುಪಡಿಸಿ ನಿ.ಪಿ.1 ರಿಂದ ನಿ.ಪಿ.8 ಎಂದು ಗುರುತಿಸಿಕೊಂಡಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ತಿಳಿದುಕೊಂಡಿರುತ್ತೇನೆ.**

ಪ್ರಶ್ನೆ 8: ನಿಮ್ಮ ಪರ ಪ್ರತಿರಕ್ಷಣೆಯ ಸಾಕ್ಷ್ಯ ವಿಚಾರಣೆ ಮಾಡಿಸುವುದಿದೆಯಾ?

ಉತ್ತರಃ **ನನ್ನ ಪರವಾಗಿ ಪ್ರತಿರಕ್ಷಣೆಯ ಸಾಕ್ಷ್ಯ ಇರುತ್ತದೆ.**

ಪ್ರಶ್ನೆ 9: ನೀವು ಏನನ್ನಾದರೂ ಹೇಳುವುದಿದೆಯಾ?

ಉತ್ತರಃ **ಪಿರ್ಯಾದುದಾರರ ಮಗ ಹಾಗೂ ನನ್ನ ನಡುವೆ ಹಣಕಾಸಿನ ವ್ಯವಹಾರ ಇತ್ತು. ಸದರಿ ವ್ಯವಹಾರದ ಭದ್ರತೆಗಾಗಿ ನಾನು ವಿಜಯ್ ಕುಮಾರ್ ರವರಿಗೆ ನಿ.ಪಿ.*1* ಚೆಕ್ಕನ್ನು ನೀಡಿರುತ್ತೇನೆ. ನಾನು ಈಗ ಪಿರ್ಯಾದುದಾರರಿಗೆ ಯಾವುದೇ ಹಣ ನೀಡುವ ಬಾಧ್ಯತೆ ಇರುವುದಿಲ್ಲ. ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ಪಿರ್ಯಾದುದಾರರು ತನ್ನ ಮಗನಿಂದ ಪಡೆದುಕೊಂಡು ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ.**

ಈ ಮೇಲಿನ ಆಪಾದಿತನು ಕೊಟ್ಟಿರುವಂತಹ ಉತ್ತರಗಳನ್ನು ಓದಿ ಹೇಳಿ, ಕೇಳಿ ಆಪಾದಿತನು ಹೇಳಿದಂತೆಯೇ ಯಥಾವತ್ತಾಗಿ ದಾಖಲಿಸಿದೆ ಎಂದು ಧೃಡೀಕರಿಸುತ್ತೇನೆ.

ಸ್ಥಳಃ ಬೆಂಗಳೂರು

ದಿನಾಂಕ-12.08.2026

**(ಬಿ.ಮೋಹನ್ ಬಾಬು)**

**6 ನೇ ಎಎಸ್‌ಸಿಜೆ ಮತ್ತು ಎ.ಸಿ.ಜೆ.ಎಮ್**

**ಬೆಂಗಳೂರು**